**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,**
**ನೃಪತುಂಗ ರಸ್ತೆ, ಬೆಂಗಳೂರು–560 001**

ಸಂಖ್ಯೆ ಸಿ–4ಆಡಳಿತ 02/ಸಭೆಗಳು / 06–07 ದಿನಾಂಕ 03.06.2006

ಜ್ಞಾಪನ

ಇವರಿಗೆ,

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ)
3. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ.

**ವಿಷಯ : ಸಭೆಗಳನ್ನು ಕ್ರಮಬದ್ಧವಾಗಿ ನಡೆಸುವ ಕುರಿತು.**

1. ಇತ್ತೀಚಿನ ದಿನಗಳಲ್ಲಿ ವಿವಿಧ ವರದಿಗಳು ಮತ್ತು ಸಾರ್ವಜನಿಕ ಅಭಿಪ್ರಾಯದಂತೆ ಶಿಕ್ಷಕರಿಗೆ, ಮುಖ್ಯ ಶಿಕ್ಷಕರಿಗೆ, ವಿವಿಧ ಮಟ್ಟದ ಅಧಿಕಾರಿಗಳು ಬೇರೆಬೇರೆ ಕಾರ್ಯಕ್ರಮಗಳಿಗೆ ತಮ್ಮದೇ ಆದ ರೀತಿಯಲ್ಲಿ ಸಭೆಯನ್ನು ಕರೆಯುತ್ತಿದ್ದು ಶಾಲೆಗಳಲ್ಲಿ ಶಿಕ್ಷಕರು, ಮುಖ್ಯ ಶಿಕ್ಷಕರು ತಮ್ಮ ಕಲಿಕಾ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ತೊಂದರೆ ಆಗುತ್ತಿರುವುದನ್ನು ಗಮನಿಸಲಾಗಿದೆ. ಇದರಿಂದ ಮಕ್ಕಳ ಕಲಿಕಾ ಅವಧಿ ಕುಂಠಿತವಾಗುತ್ತಿದೆ. ಈ ಕುರಿತು ದಿನಾಂಕ 1.6.2006ಮತ್ತು 2.6.2006 ರಂದು ನಡೆದ ಇಲಾಖಾಧಿಕಾರಿಗಳ ಹಾಗೂ ಉಪನಿದೇಶಕರ ಸಭೆಯಲ್ಲಿ ಚರ್ಚಿಸಲಾಗಿದೆ. ಇದನ್ನು ಗಮನಿಸಿ ಇನ್ನು ಮುಂದೆ ಈ ಕೆಳಕಂಡ ಷರತ್ತುಗಳನ್ನು ಹೊರತುಪಡಿಸಿ ಎಲ್ಲಾ ರೀತಿಯ ಸಭೆಗಳನ್ನು ನಡೆಸುವುದನ್ನು ರದ್ದು ಪಡಿಸಲಾಗಿದೆ.
   ಅ) ಮುಖ್ಯ ಶಿಕ್ಷಕರ ಸಭೆಯನ್ನು ಶನಿವಾರ ಮಾತ್ರ ತಿಂಗಳಿಗೊಮ್ಮೆ ಅಥವಾ ಅತ್ಯಂತ ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ ನಿರ್ದಿಷ್ಟ ಅಜೆಂಡಾ ಇಟ್ಟುಕೊಂಡು ಸಭೆಯನ್ನು ಕರೆಯತಕ್ಕದ್ದು.
   ಆ) ಸಿ.ಆರ್.ಪಿ.ಗಳು ಸಹ ತಿಂಗಳಿಗೊಮ್ಮೆ ಮಾತ್ರ ಸಮಾಲೋಚನಾ ಸಭೆಯನ್ನು ನಡೆಸತಕ್ಕದ್ದು. ಈ ಸಭೆಯಲ್ಲಿ ನಿರ್ದಿಷ್ಟ ಕಾರ್ಯಸೂಚಿ ಇರತಕ್ಕದ್ದು.
   ಇ) ಕ್ಷೇತ್ರ ಶಿಕ್ಷಣಾಧಿಕಾರಿಗಳ ಗಮನಕ್ಕೆ ತರದೆ ಸಭೆಯನ್ನು ಕರೆಯಬಾರದು.

   ಮೇಲ್ಕಂಡ ಷರತ್ತುಗಳನ್ನು ಹೊರತುಪಡಿಸಿ ಸಭೆಗಳು ನಡೆದಿರುವುದು ಕಂಡು ಬಂದಲ್ಲಿ ಸಂಬಂಧಿಸಿದವರು ಶಿಸ್ತುಕ್ರಮಕ್ಕೆ ಒಳಗಾಗಬೇಕಾಗುತ್ತದೆ ಎಂದು ಎಚ್ಚರಿಸಿದೆ.
2. ಇದೇ ರೀತಿಯಲ್ಲಿ ಜಿಲ್ಲಾ ಮಟ್ಟದಲ್ಲಿ ನಡೆಯುವ ವಿವಿಧ ಸಭೆಗಳನ್ನು ಸಂಬಂಧಿಸಿದ ಎಲ್ಲಾ ಉಪನಿರ್ದೇಶಕರ ಗಮನಕ್ಕೆ ತಂದು ಸಭೆಯನ್ನು ಕರೆಯಬೇಕು.
3. ರಾಜ್ಯ ಮಟ್ಟದಲ್ಲಿರುವ ವಿವಿಧ ನಿರ್ದೇಶನಾಲಯಗಳು ಉಪನಿರ್ದೇಶಕರು, ಡಯಟ್ ಪ್ರಾಂಶುಪಾಲರುಗಳ ಹಾಗೂ ಇತರ ಅಧಿಕಾರಿಗಳ ಸಭೆಯನ್ನು ರಾಜ್ಯಮಟ್ಟದಲ್ಲಿ ಕರೆಯಬೇಕಾದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಗಮನಕ್ಕೆ ತಂದು ಸಭೆಯನ್ನು ಏರ್ಪಡಿಸಲು ಸೂಚಿಸಿದೆ.

ಸಹಿ/–(ಎಂ. ಮದನಗೋಪಾಲ್)
ಆಯುಕ್ತರು

From page - 23

Whereas the States of Karnataka, after consideration of the material and in the interest of health and well being of the children and students of the States of Karnataka, has felt an imminent need to prevent the sale of Carbonated Beverages within the school and college premises and within the hostel premises.

Now, in exercise of the powers under Article 162 of the Constitution of India, fead read with Emtry 6 of list-II of VII Schedule of the Constitution of India and the inherent and general powers vested in it, the Government of Karnataka prohibits teh sale and distribution of soft drinks (Carbonated Beverages) within teh school premises and within the hostel premises throughout the State of Karnatka with immediate effect and until further orders.

By Order and in the name of Government of Karnataka
S.R. Shankar
Under Secretary to Government,
Health and Family Welfare Deapartment